

# ಸೆಲ್ಫೀ ಸ್ಟಾರ್‌ಗಳು!

■ ಪದ್ಮನಾಭ ಭಟ್

**ಲಾಕ್‌ಡೌನ್ ಚಿತ್ರರಂಗದ ಹೆಬ್ಬಾಗಿಲಿಗೆ ಬೀಗ ಜಡಿದಿದೆ. ಆದರೆ ಸೃಜನಶೀಲ ಮನಸ್ಸುಗಳು ಸೆಟ್, ಕ್ಯಾಮೆರಾ, ಆ್ಯಕ್ಷನ್ ಸೂಚನೆಗಳಿಗಾಗಿಯೇ ಕಾದು ಕೂತಿಲ್ಲ. ಮನೆಯಲ್ಲಿಯೇ ಕೂತು ಇರುವ ಸೌಲಭ್ಯಗಳನ್ನೇ ಬಳಸಿಕೊಂಡು ಜನರನ್ನು ರಂಜಿಸುವ, ಸಂದೇಶ ನೀಡುವ, ಒಗ್ಗಟ್ಟಿನ ಕರೆ ಮೊಳಗಿಸುವ, ಹೊಸಹೊಸ ಐಡಿಯಾಗಳ ಬಗ್ಗೆ ವಿಚಾರ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಹಾಗೆ ನೋಡಿದರೆ ಸಹಜಸ್ಥಿತಿಗಿಂತ ಲಾಕ್‌ಡೌನ್‌ನಲ್ಲಿಯೇ ಚಿತ್ರರಂಗದವರಿಗೆ ಹೆಚ್ಚು ಸೃಜನಶೀಲ ಒರತೆ ಉಕ್ಕುತ್ತಿರುವಂತಿದೆ.**



ಅರುಣ್ ಸಾಗರ್

ಚಿತ್ರರಂಗ ಮನೆಯ ಚಿಪ್ಪಿನೊಳಗೆ ಸೇರಿಕೊಂಡಿದೆ. ಕ್ಯಾಮೆರಾ, ಕ್ಯಾರವಾನ್‌ಗಳು ಮಿಸುಕಾಟವಿಲ್ಲದೇ ಬಿದ್ದುಕೊಂಡಿವೆ. ಯಂತ್ರಗಳೇನೋ ಮನುಷ್ಯ ಚಾಲನೆ ಮಾಡಿದರೆ ಕೆಲಸ ಮಾಡುತ್ತವೆ; ಇಲ್ಲವಾದರೆ ಇಲ್ಲ. ಆದರೆ ಮನುಷ್ಯನಿಗೆ ಹಾಗೆ ಸುಮ್ಮನೇ ಇರಲು ಸಾಧ್ಯವೇ? ಅದರಲ್ಲಿಯೂ ಸೃಜನಶೀಲ ಮನಸ್ಸುಗಳಂತೂ ಪಂಜರದಲ್ಲಿಯೂ ಪರಮಾದ್ಭುತ ಕನಸುಗಳನ್ನು ಹೆಣೆಯುತ್ತಿರುತ್ತದೆ. ತಾನಿದ್ದಲ್ಲೇ ಅದನ್ನು ಸಾಕಾರಗೊಳಿಸುವುದು ಹೇಗೆ ಎಂಬ ಪ್ರಯತ್ನದಲ್ಲಿ ಸದಾ ನಿರತವಾಗಿರುತ್ತದೆ. ಕನ್ನಡ ಚಿತ್ರರಂಗದ ಹಲವರ ಪರಿಸ್ಥಿತಿಯೂ ಹಾಗೆಯೇ ಆಗಿದೆ.



ಪವನ್ ಕುಮಾರ್

ಸೆಟ್‌ಗೆ ಹೋಗದೇ ಕಳೆದ ಒಂದು ತಿಂಗಳಲ್ಲಿಯೇ, ಕ್ಯಾಮೆರಾ ಇಲ್ಲದ ಪರಿಸ್ಥಿತಿಯಲ್ಲಿ ಹಲವರ ಮೊಬೈಲ್ ಕ್ಯಾಮೆರಾದಲ್ಲಿ ಸೆಲ್ಫೀ ಮೋಡ್ ಆನ್ ಆಗಿದೆ. ಸೆಲ್ಫಿ ವಿಡಿಯೊಗಳು ಒಂದೊಂದಾಗಿ ಹೊರಗೆ ಬರುತ್ತಿವೆ. ಸೋಷಿಯಲ್ ಮೀಡಿಯಾಗಳಲ್ಲಿಯೂ ಸಿನಿಕರ್ಮಿಗಳು ಹಿಂದಿಗಿಂತಲೂ ಹೆಚ್ಚು ಆ್ಯಕ್ಟಿವ್ ಆಗಿದ್ದಾರೆ. ಚಿತ್ರಮಂದಿರಕ್ಕೆ ಜನರು ಬರಲಾರದ ಸ್ಥಿತಿಯಲ್ಲಿ ತಾವೇ ಜನರ ಮನೆಮನೆಗೆ ಆನ್‌ಲೈನ್ ಮೂಲಕ ಹೋಗುವ ಪ್ರಯತ್ನ ಶುರುವಾಗಿದೆ.

ಎರಡು ವಾರಗಳ ಹಿಂದೆಯೇ ನಿರ್ದೇಶಕ ಪವನ್ ಒಡೆಯರ್ ತಮ್ಮ ಹೊಸ ಸಿನಿಮಾ 'ರೇಮೊ' ಸಿನಿಮಾದ ಕುರಿತ ಒಂದು ಸೆಲ್ಫೀ ಪ್ರಮೋಷನಲ್ ವಿಡಿಯೊ ಮಾಡಿ ಹರಿಬಿಟ್ಟಿದ್ದರು. ಇನ್ನೊಬ್ಬ ನಿರ್ದೇಶಕ ಪವನ್ ಕುಮಾರ್ ಹಿಂದೆ ಬಿದ್ದಿಲ್ಲ. ಯಾವಾಗಲೂ ಇನೊವೇಟಿವ್ ಐಡಿಯಾಗಳ ಮೂಲಕವೇ ಸುದ್ದಿ ಮಾಡುವ ಅವರು ಹೊಸದೊಂದು ಐಡಿಯಾವನ್ನು ಸೋಷಿಯಲ್ ಮೀಡಿಯಾದ ತಮ್ಮ ಪುಟದಲ್ಲಿ ಹರಿಬಿಟ್ಟಿದ್ದಾರೆ.

ಒಟ್ಟು ಕನ್ನಡಿಗರ ಜನಸಂಖ್ಯೆ ಆರು ಕೋಟಿಯನ್ನು ಮಿಕ್ಕಿದೆ. ಅವರಲ್ಲಿ ಶೇ 0.2 ಅಂದರೂ 1,20,000 ಜನರಾಗುತ್ತಾರೆ. ಅಷ್ಟು ಜನರು ಒಂದು ವರ್ಷದ ಕಾಲಾವಧಿಗೆ ಒಂದು ಸಾವಿರ ರೂಪಾಯಿಗಳನ್ನು ನೀಡಿ ಚಂದಾದಾರರಾದರೆ ₹ 12 ಕೋಟಿ ಸಂಗ್ರಹವಾಗುತ್ತದೆ. ಆ ಹನ್ನೆರಡು ಕೋಟಿಗಳಲ್ಲಿ ಒಂದೊಂದು ಕೋಟಿ ರೂಪಾಯಿಯ 12 ಕಂಟೆಂಟ್ ಪ್ರಧಾನ ಸಿನಿಮಾಗಳನ್ನು ತೆಗೆಯಬಹುದು. ಥಿಯೇಟರ್ ರಿಲೀಸ್, ಬಾಕ್ಸ್ ಆಫೀಸ್ ಕಲೆಕ್ಷನ್‌ಗಳ ತಲೆಬಿಸಿಯಿಲ್ಲದೆ ಚಿತ್ರ ತಯಾರಿಸಿ 1.20 ಲಕ್ಷ ಜನರಿಗೆ ಆನ್‌ಲೈನ್ ಮೂಲಕ ಸಿನಿಮಾ ಕಳಿಸುವುದು. ಅವರು ಒಂದು ಸಾವಿರ ರೂಪಾಯಿಗಳಿಗೆ ವರ್ಷಕ್ಕೆ ಹನ್ನೆರಡು ಸಿನಿಮಾ ನೋಡಬಹುದು. ಉಳಿದ ಜನರು ಉಚಿತವಾಗಿಯೇ ಸಿನಿಮಾ ನೋಡಬಹುದು. ಅಥವಾ ಕನಿಷ್ಠ ದರವನ್ನು ನಿಗದಿಪಡಿಸಿ ಆನ್‌ಲೈನ್‌ನಲ್ಲಿಯೇ ಸಿನಿಮಾ ನೋಡುವ ಅವಕಾಶ ಒದಗಿಸುವುದು ಪವನ್ ಐಡಿಯಾ. ಲಾಕ್‌ಡೌನ್ ಟೈಮಲ್ಲಿ ಹುಟ್ಟಿಕೊಂಡು ಈ ಪರಿಕಲ್ಪನೆಯಲ್ಲಿ ಕನ್ನಡ ಸಿನಿಮಾಗಳಿಗೆ ಹೊಸ ಮಾರುಕಟ್ಟೆ